**ದಿಃ10.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**
**ಪಾಟೀಸವಾಲುಃ ವಾದಿ ಪರ ವಕೀಲರಿಂದಃ**

ನಾನು ವಕೀಲ ವೃತ್ತಿ ಮಾಡುತ್ತಿದ್ದೇನೆ ಅಂದರೆ ಮೊದಲು ಮಾಡುತ್ತಿದ್ದು, ಈಗ ಮಾಡುತ್ತಿಲ್ಲ. ಈಗ ನಾನು ವ್ಯವಸಾಯ ಮಾಡುತ್ತಿದ್ದೆನೆ. ನಾನು Real estate ವ್ಯವಹಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ದಲ್ಲಾಳಿಅಂಗಡಿಯಲ್ಲಿ ಕೆಲಸ ಮಾಡುತ್ತಿರುವುದಾಗಿ ನುಡಿಯುತ್ತಾರೆ.

ಪ್ರತಿವಾದಿ 01 ಮತ್ತು ಅವರ ಕುಟುಂಬದವರು ನನಗೆ ಚಂದ್ರು ಬಾಡಗಿ ರವರ ಮೂಲಕ ಪರಿಚಿತರು. ಸದರಿ ಚಂದ್ರು ಬಾಡಗಿ ರವರು ಈ ದಾವೆಯಲ್ಲಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಚಂದ್ರು ಬಾಡಗಿ ರವರು ತಮ್ಮ ಸಾಕ್ಷ್ಯದಲ್ಲಿ ತಮಗೆ ಪ್ರತಿವಾದಿ 01 ಮತ್ತು ಅವರ ಕುಟುಂಬದವರ ಬಗ್ಗೆ ಗೊತ್ತಿಲ್ಲ ಎಂದುನುಡಿದಿದ್ದು, ನನಗೆ ಪ್ರತಿವಾದಿ 01 ಮತ್ತು ಅವರ ಕುಟುಂಬದವರು ಚಂದ್ರು ಬಾಡಗಿ ರವರ ಮೂಲಕ ಪರಿಚಿತರಾದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿ.ಡಿ.01 ರ ವ್ಯವಹಾರಕ್ಕೆ ಮೊದಲು ಮಾತುಕತೆಯನ್ನು ಪ್ರತಿವಾದಿ 01 ರವರ ಪತ್ನಿ ರೇಖಾರವರೊಂದಿಗೆ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷೀ ಮುಂದುವರೆದು ಪ್ರತಿವಾದಿ 01 ಮತ್ತು ಅವರ ಪತ್ನಿ ಇಬ್ಬರೊಂದಿಗೆ ಮಾತುಕತೆ ಆಗಿರುವುದಾಗಿ ನುಡಿಯುತ್ತಾರೆ. ಕ್ರಯದ ಮಾತುಕತೆ ಸಮಯದಲ್ಲಿ ಪ್ರತಿವಾದಿ

01 ರವರಿಗೆ 03 ಜನ ಮೈನರ್ ಹೆಣ್ಣು ಮಕ್ಕಳು ಇದ್ದ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿ. ಆ ಸಮಯದಲ್ಲಿ ದಾವಾ ಆಸ್ತಿ ಪ್ರತಿವಾದಿ 01 ರವರಿಗೆ ಅವರ ಅಜ್ಜನಾದ ಇರ್ರೈಯ್ಯ ರವರಿಂದ ಬಂದಿರುತ್ತದೆ ಎನ್ನುವ ವಿಚಾರ ನನಗೆ ಗೊತ್ತುಇತ್ತು ಎಂದರೆ ಸರಿ. ಸದರಿ ವಿಚಾರವನ್ನು ನಾನು ನನ್ನ ಪತ್ನಿ ಯಾದ ಪ್ರತಿವಾದಿ - 02 ರವರಿಗೆ ಹೇಳಿದ್ದೆ ಎಂದರೆ ಸರಿ.

ಪ್ರತಿವಾದಿ 01 ರವರು ಆಟೋ ಚಾಲಕರಾಗಿರುತ್ತಾರೆ ಎಂದರೆ ಸರಿ. ಪ್ರತಿವಾದಿ - 01 ರವರ ಪತ್ನಿ ಕೆಳಗೇರಿಯ ಸಂಗೀತ ವಿದ್ಯಾಲಯ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದು ಸಂಪಾದನೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ - 01 ರವರ ಪತ್ನಿ ಕೆಲಸ ಮಾಡುತ್ತಿರುವದರಿಂದ ವೈದ್ಯಕೀಯ ಸೌಲತ್ತು ಇರುತ್ತದೆ ಎಂದರೆ ಸರಿಯಲ್ಲ. ಸದರಿ ವೈದ್ಯಕೀಯ ಸವಲತ್ತಿನ ಅಡಿ ಪ್ರತಿವಾದಿ - 01 ರವರ ಪತ್ನಿಯ ಕುಟುಂಬಕ್ಕೆ ಉಚಿತ ವೈದ್ಯಕೀಯ ಚಿಕಿತ್ಸೆ ಸೌಲಭ್ಯ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ 01 ರವರಿಗೆ ಅನಾರೋಗ್ಯ ಬಂದಿಲ್ಲಿ ಚಿಕಿತ್ಸೆ ಸಂಬಂದ ಆರ್ಥಿಕ ತೊಂದರೆ ಬರುವುದಿಲ್ಲ ಎಂದರೆ ಸರಿಯಲ್ಲ.

ನಿ.ಡಿ.01 ಆಗುವ ಕಾಲಕ್ಕೆ ಪ್ರತಿವಾದಿ - 01 ರವರಿಗೆ ಮೈನರ್ ಮಕ್ಕಳು ಇದ್ದು ಕ್ರಯ ಪತ್ರಕ್ಕೆ ಮೊದಲು ನ್ಯಾಯಾಲಯದಿಂದ ಯಾವುದೇ ಅನುಮತಿ ಪಡೆದಿಲರುವುದಿಲ್ಲ. ಆ ರೀತಿ ಅನುಮತಿ ಪಡೆದುಕೊಳ್ಳುವುದು ಅವಶ್ಯಕತೆ ಇರುತ್ತದೆ ಎಂದು ನಾನು ಪ್ರತಿವಾದಿ - 01 ರವರಿಗೆ ಹೇಳಿರಲಿಲ್ಲ.

ನಿ.ಡಿ.01 ರಲ್ಲಿ ನಿಗದಿಯಾದ ಕ್ರಯದ ಹಣವನ್ನು ಪಾವತಿ ಮಾಡಲಾಗಿರುತ್ತದೆ ಎಂದರೆ ಸರಿ. ಸಾಕ್ಷೀ ಮುಂದುವರೆದು ಚೆಕ್ ಮೂಲ ಪಾವತಿ ಆಗಿರುತ್ತದೆ ಎನ್ನುತ್ತಾರೆ. ಕ್ರಯದ ಹಣ ವನ್ನು ಪಾವತಿ ಮಾಡಿದ ನಂತರ ಹೆಚ್ಚಿನ ಹಣ ನಾವು ಪ್ರತಿವಾದಿ - 01 ರವರಿಗೆ ಪಾವತಿ ಮಾಡುವ ಅವಶ್ಯಕತೆ ಬರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷೀ ಮುಂದುವರೆದು ಕ್ರಯ ಪತ್ರದ ನಂತರ ಪ್ರತಿವಾದಿ - 01 ರವರು ತಮ್ಮಿಂದ ಖಾಸಗಿಯಾಗಿ ತಮ್ಮ ಮನೆತನದ ಅಡಚಣೆಗಾಗಿ ಹಣ ಪಡೆದಿರುತ್ತಾರೆಂದು ನುಡಿಯುತ್ತಾರೆ. ಆ ರೀತಿ ಖಾಸಗಿಯಾಗಿ ಪಡೆದುಕೊಂಡು ಹಣ ನಿ.ಡಿ.01 ರ ಕ್ರಯದ ಹಣಕ್ಕೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ - 01 ರವರು ಖಾಸಗಿಯಾಗಿ ನನ್ನನಿಂದ ಪಡೆದ ಹಣಕ್ಕೆ ಸಂಬಂಧಿಸಿದಂತೆ ರಶೀದಿಯನ್ನು ಹಾಜರು ಪಡಿಸಿರುವುದಿಲ್ಲ. ಆದರೆ ನನ್ನ ಖಾಸಗಿ ಡೈರಿಯಲ್ಲಿ ನಮೂದು ಮಾಡಿರುತ್ತೇನೆ. ಕ್ರಯ ಪತ್ರದ ನಂತರವೂ ನಾನು ಪ್ರತಿವಾದಿ - 01 ರವರಿಗೆ ಹಣ ಕೊಟ್ಟಿರುವುದಾಗಿ ಹೇಳಿದ್ದು ಅದರ ಅರ್ಥ ನಿ.ಡಿ.01 ರ ಕಾಲಕ್ಕೆ ಆಸ್ತಿಯ ಬೆಲೆ ಹೆಚ್ಚು ಇತ್ತು ಎಂದರೆ ಸರಿಯಲ್ಲ. ಆಗಿನ ಆಸ್ತಿಯ ಬೆ ಲೆ 1 1/2 ಕೋಟಿಯಿಂದ 02 ಕೋಟಿ ಇದ್ದು ಪ್ರತಿವಾದಿ - 01 ರವರ ಬಾಯಿ ಮುಚ್ಚಿಸಲು ಹೆಚ್ಚಿನ ಹಣ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಮೇಲೇ ಹೇಳಿದ ಹೆಚ್ಚಿನ ಹಣದ ಬಗ್ಗೆ ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಾನು ಹೆಚ್ಚಿನ ಹಣ ಪ್ರತಿವಾದಿ - 01 ರವರಿಗೆ ನೀಡದ ಕಾರಣ ಆ ಬಗ್ಗೆ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿ ಪ್ರತಿವಾದಿ - 01 ರವರ ಪಿತಾರ್ಜಿತ ಆಸ್ತಿ ಆಗಿದ್ದು ಅದರಲ್ಲಿ ವಾದಿಗಳಿಗೆ ಹಕ್ಕು ಇದ್ದು, ಹೆಚ್ಚಿನ ಬೆಲೆ ಇದ್ದ ದಾವಾ ಆಸ್ತಿಯನ್ನು ಕಡಿಮೆ ಹಣಕ್ಕೆ ಪಡೆದು ಮೋಸ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ದಾಖಲಾಗಿದ್ದ ಪ್ರತಿವಾದಿ - 01 ರವರನ್ನು ಕರೆದುಕೊಂಡು ಬಂದು ಕ್ರಯ ಪತ್ರ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ವಾದಿಗಳಿಗೆ ದಾವಾ ಆಸ್ತಿಯಲ್ಲಿ ಹಕ್ಕು ಸಿಗಬಾರದು ಎಂದು ಅವರಿಗೆ ಮೋಸ ಮಾಡಲು ಪ್ರಯತ್ನಿಸುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃಇಲ್ಲ**

(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸ. ಇದೆ.**

**3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.**